ವಿಶ್ವೇಶ್ವರಯ್ಯ ಕಬ್ಬಿಣ ಮಂತ್ತು ಉಕ್ಕಿನ ಕಾರ್ಖಾನೆಯನ್ನು ಭಾರತೀಯ ಉಕ್ಕು ಪ್ರಾಧಿಕಾರಕ್ಕೆ ವಹಿಸುವ ಬಗ್ಗೆ.

೧೪೩೯. ಶ್ರೀ ಆರ್. ವೆಂಕಟರಾಮಯ್ಯ(ಮಳಬಾಗಿಲು).—ಮಾನ್ಯ ಭಾರೀ ಹಾಗೂ ಮಾಧ್ಯಮ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಸರ್ಕಾರವು ತೊಡಗಿಸಿರುವ ಬಂಡವಾಳವೆಷ್ಟು ಹಾಗೂ ಈ ಪೈಕಿ ಕೇಂದ್ರ ಸರ್ಕಾರದ ಪಾಲೆಷ್ಟು ?

ಆ) ಈ ಉದ್ಯಮದಲ್ಲಿ ಈ ವೇಳೆಗೆ ಆಗಿರುವ ಕ್ಯೋಢಿಕೃತ ನಾಲವೆಷ್ಟು ? ವಿದ್ಯುಚ್ಛಕ್ತಿಗೆ ಕೊಡಬೇಕಾದ ಒಟ್ಟು ಬಾಕಿ ಹಣವೆಷ್ಟು ?

ಇ) ಈ ಉದ್ಯಮವನ್ನು ರೋಗಗ್ರಸ್ಥ ಘಟಕವೆಂದು (ಸಿಕ್ ಯೂನಿಟ್) ಸರ್ಕಾರ ಘೋಷಿಸಿದೆಯೇ ?

ಈ) ಇದರ ಆವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರವು ಏನಾದರೂ ಯೋಜನೆ ಹಾಕಿಕೊಂಡಿದೆಯೇ ?

ಉ) ಈ ಉದ್ಯಮವನ್ನು ಎಸ್.ಎ.ಐ.ಎಲ್. ಸಂಸ್ಥೆಗೆ ವಹಿಸಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೩೧-೩-೮೨ ರಂದು ತೊಡಗಿಸಿರುವ ಬಂಡವಾಳ ಈ ಕೆಳಗಿನಂತಿದೆ.

	(ಕೋಟಿ ರೂ. ಗಳಲ್ಲಿ)
ರಾಜ್ಯ ಸರ್ಕಾರ	೩೧.೪೭
ಕೇಂದ್ರ ಸರ್ಕಾರ	—

ಆ) ೩೧-೩-೧೯೮೮ ರಂದು ಕ್ಯೋಢೀಕೃತ ನಾಲ ೩೧.೮೮ ಕೋಟಿ ರೂ. ಗಳಂ. ವಿದ್ಯುಚ್ಛಕ್ತಿಗೆ ಕೊಡಬೇಕಾದ ಬಾಕಿ ೬೫.೨೬ ಕೋಟಿ ರೂ. ಗಳಂ.

ಇ) ಇಲ್ಲ.

ಈ) ಈ ಕಾರ್ಖಾನೆಯನ್ನು ಭಾರತೀಯ ಉಕ್ಕು ಪ್ರಾಧಿಕಾರಕ್ಕೆ ಹಸ್ತಾಂತರಿಸಲಂ ರಾಜ್ಯ ಸರ್ಕಾರ ನಿರ್ಧರಿಸಿದೆ.

ಉ) ಈ ಬಗ್ಗೆ ಕೇಂದ್ರ ಸರ್ಕಾರದೊಡನೆ ಉನ್ನತ ಮಟ್ಟದಲ್ಲಿ ವ್ಯವಹಾರ ನಡೆಯುತ್ತಿದೆ.

ರೇಷ್ಮೆ ರೀಲಿಂಗ್ ಕೇಂದ್ರಗಳು.

೧೯೫೯. ಶ್ರೀ ಬಿ. ಲಕ್ಕಪ್ಪ(ಚಿಕ್ಕನಾಯಕನಹಳ್ಳಿ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ರೇಷ್ಮೆ ಪ್ಯಪಸಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ರೇಷ್ಮೆ ರೀಲಿಂಗ್ ಕೇಂದ್ರಗಳಿರುವುದೆಷ್ಟು ? ಹಾಗೂ ಇವುಗಳಲ್ಲಿ ಲಾಭದಲ್ಲಿ ಹಾಗೂ ನಷ್ಟದಲ್ಲಿ ನಡೆಯುತ್ತಿರುವ ಕೇಂದ್ರಗಳೆಷ್ಟು ಹಾಗೂ ಅವುಗಳ ಮೊತ್ತವೆಷ್ಟು ?

ಆ) ಹೊಸದಾಗಿ ರೀಲಿಂಗ್ ಕೇಂದ್ರ ತೆರೆಯಲು ಬೇಕಾಗುವ ಅವಶ್ಯಕತೆಗಳೇನು ಹಾಗೂ ಹೊಸ ಕೇಂದ್ರಗಳನ್ನು ತೆರೆಯುವ ಉದ್ದೇಶ ಸರ್ಕಾರದವರ ಗಮನದಲ್ಲಿ ಇದೆಯೇ ?

ಇ) ಹಾಗಿದ್ದಲ್ಲಿ, ಯಾವ ಯಾವ ಸ್ಥಳಗಳಲ್ಲಿ ತೆರೆಯಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಸಚಿವರು).—

ಅ) ರಾಜ್ಯದಲ್ಲಿ ಇರುವ ರೇಷ್ಮೆ ರೀಲಿಂಗ್ ಕೇಂದ್ರಗಳು.—

ಸರ್ಕಾರಿ ರೀಲಿಂಗ್ ಕೇಂದ್ರಗಳು — ೬

ಖಾಸಗೀ ರೀಲಿಂಗ್ ಕೇಂದ್ರಗಳು — ೯೦೪೦

ನಷ್ಟದಲ್ಲಿ ನಡೆಯುತ್ತಿರುವ ಕೇಂದ್ರಗಳು.—

ಸರ್ಕಾರಿ ರೀಲಿಂಗ್ ಕೇಂದ್ರಗಳು — ೬

ಖಾಸಗಿ ರೀಲಿಂಗ್ ಕೇಂದ್ರಗಳು — ಮಾಹಿತಿ ಇರುವುದಿಲ್ಲ.

ನಷ್ಟದ ಮೊತ್ತ : ವರ್ಷಕ್ಕೆ ಸಮಾರು ೨೮೩ ೨೫ ಲಕ್ಷ ರೂಪಾಯಿಗಳು.

ಹೊಸದಾಗಿ ರೀಲಿಂಗ್ ಕೇಂದ್ರ ತೆರೆಯಲು ಬೇಕಾದ ಅವಶ್ಯಕತೆಗಳು.—

೧. ಕಚ್ಚಾ ಸಾಮಗ್ರಿಯಾದ ರೇಷ್ಮೆ ಗೂಡಿನ ದೊರೆಯುವಿಕೆ.

೨. ರೇಷ್ಮೆ ನೂಲು ಬಿಚ್ಚಲು ಬೇಕಾದ ಸೂಕ್ತ ನೀರಿನ ಸೌಲಭ್ಯ.

೩. ನೂಲು ಬಿಚ್ಚಾಣಿಕೆಯಲ್ಲಿ ಅನುಭವವುಳ್ಳ ಕೆಲಸಗಾರರು.

೪. ಸಾಕಷ್ಟು ಬಂಡವಾಳದ ಹೂಡಿಕೆ.

ಹೊಸ ಕೇಂದ್ರಗಳನ್ನು ತೆರೆಯುವ ಉದ್ದೇಶವಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಜೆ. ಎಚ್. ಪಟೇಲ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು.—ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಅರಣ್ಯದಲ್ಲಿ ಹಸಿರು ಮರಗಳನ್ನು ಕಡಿದಿರುವುದು.

೧೪೫೬. ಶ್ರೀ ಗೋಪಾಲ ಮಂಕುಂದ ಕಾನಡೆ(ಸಿಸಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿ ಹಸಿರು ಮರ ಕಡಿದು ಲಕ್ಷಾಂತರ ರೂಪಾಯಿಯಷ್ಟು ನಷ್ಟ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅಂತವರ ಮೇಲೆ ತೆಗೆದುಕೊಂಡ ಕ್ರಮವೇನು ?

ಆ) ಒಟ್ಟು ಮರ ಕಡಿದ ಸಂಖ್ಯೆಗಳೆಷ್ಟು ? ಯಾವ ಯಾವ ಊರಿನಲ್ಲಿ ಎಷ್ಟೆಷ್ಟು ಮರ ಕಡಿದಿದ್ದಾರೆ ?

ಇ) ಇದಕ್ಕೆ ಸಂಬಂಧಪಟ್ಟ ಅಧಿಕಾರಿ ವರ್ಗದವರಾ ಶಾಮೀಲಾಗಿದ್ದಾರೆಯೇ ? ಈ ವಿಷಯವನ್ನು ಅಧಿಕಾರಿಗಳ ಗಮನಕ್ಕೆ ತಂದರೂ ಏನೂ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಶ್ರೀ ಜಿ.ಎಸ್. ಬಾಗಲಕೋಟ್(ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹಸಿರು ಮರಗಳನ್ನು ಕಡಿದ ಕೆಲವು ಪ್ರಕರಣಗಳು ಗಮನಕ್ಕೆ ಬಂದಿದೆ. ಆದರೆ ಇಲಾಖೆಗೆ ನಷ್ಟವಾಗಿಲ್ಲ. ಇಂತಹ ಪ್ರಕರಣಗಳಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗಿದೆ.